ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಮೊನ್ನೆ ತಾನೆ ಮಾನ್ಯ ಮಂತ್ರಿಗಳು ಆಯವ್ಯಯ ಪಟ್ಟಿಯ ಚರ್ಚೆಗೆ ಉತ್ತರ ಕೊಡುತಕ್ಕ ಕಾಲದಲ್ಲಿ ಈ 15 ಲಕ್ಷ ರೂ.ಗಳ ಲುಕ್ಸಾನನ್ನು 7-8 ಲಕ್ಷಕ್ಕೆ ಇಳಿಸಿರುವುದಾಗಿ ತಿಳಿಸಿದ್ದರು. ಆದರೆ ಈಗ ಇಲ್ಲಿ ಕೊಟ್ಟಿರತಕ್ಕ ಅಂಕಿ ಅಂಶಗಳನ್ನು ಲೆಕ್ಕ ಹಾಕಿ ನೋಡಿದರೆ ಹಾಗೆ ಕಾಣುವುದಿಲ್ಲ. ಆದಾಗ್ಯೂ ಮಂತ್ರಿಗಳು ಹೇಗೆ ಕಡಮೆ ಮಾಡಿದ್ದೇವೆಂತ ಆ ದಿವಸ ಹೇಳಿದರು ?

ಶ್ರೀ ಆರ್. ದಯಾನಂದ ಸಾಗರ್.—ಈ ವರ್ಷದ ಲೆಕ್ಕ ಪತ್ರಗಳು ಇನ್ನೂ ಆಡಿಟ್ಟಾಗಿಲ್ಲ ಎಂತ ಆಗಲೆ ಉತ್ತರ ಕೊಟ್ಟಿದ್ದೇನೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ತಾವು ಹೇಳುತ್ತಿರುವ ಆಡಿಟ್ ನಮಾಚಾರ ಮೂರನೇ ವರ್ಷಕ್ಕೆ ಸಂಬಂಧಪಟ್ಟದ್ದು. ನಾನೀಗ ಕೇಳುತ್ತಿರುವುದು ಇದರ ಹಿಂದಿನ ಎರಡು ವರ್ಷಗಳಲ್ಲಿ ಎಷ್ಟು ನಷ್ಟವನ್ನು ಕಡಮೆ ಮಾಡಿದ್ದೀರಾ ಎಂಬುದಕ್ಕೆ ಅಂಕಿ ಅಂಶಗಳನ್ನು ಕೊಡುತ್ತೀರಾ ?

ಶ್ರೀ ಟಿ. ರಾಚಯ್ಯ.—ನಾನು ಆ ದಿವಸ ಹೇಳಿದ್ದು ವರ್ಷ ವರ್ಷ ನಮಗೆ ಈ ಬಾಬಿನಲ್ಲಿ 15 ಲಕ್ಷ, 12 ಲಕ್ಷ ಹೀಗೆಲ್ಲಾ ನಷ್ಟವಾಗುತ್ತಿದೆ. ಈ ನಷ್ಟವನ್ನು ಆದಷ್ಟೂ ಪ್ರಯತ್ನಪಟ್ಟು 1962-63ರ ಆಖೈರಿನೊಳಗಾಗಿ ಈಗಾಗುತ್ತಿರುವ ನಷ್ಟದಲ್ಲಿ ಅರ್ಧಭಾಗವನ್ನಾದರೂ ಕಡಮೆ ಮಾಡುವುದಕ್ಕೆ ಪ್ರಯತ್ನಮಾಡುತ್ತಿದ್ದೇವೆಂತ ಹೇಳಿದ್ದೆನು. ಆದರೆ ಈಗ 62-63ನೇ ಸಾಲಿನ ಲೆಕ್ಕಪತ್ರಗಳೆಲ್ಲ ಆಡಿಟ್ಟಾಗಿ ಮಾರ್ಚಿ ಆಖೈರಿಗೆ ಬರುತ್ತವೆ. ಈಗಾಗಲೇ ನಾವು ಶ್ರೀ ಎಸ್. ಕೆ. ಡೇ ಅವರ ಸಲಹೆಗಳನ್ನು ಬಹಳ ಮಟ್ಟಿಗೆ ಜಾರಿಗೆ ತಂದಿದ್ದೇವೆ. ಅದರಿಂದ ಈ ವರ್ಷದಲ್ಲಿ ಈ ನಷ್ಟ ಕಡಮೆ ಇರುತ್ತೆ ಅಂತ ಹೇಳಿದ್ದೇನೆ.

ಶ್ರೀ ಟಿ. ಮಾದಯ್ಯಗೌಡ.—ಖಾಸಗೀ ಸಂಸ್ಥೆಗಳವರು ಈ ಉದ್ಯಮದಲ್ಲಿ ಲಾಭ ಸಂಪಾದನೆ ಮಾಡುತ್ತಿರುವಾಗ ಸರ್ಕಾರಿ ಉದ್ಯಮದಲ್ಲಿ ಹೀಗೆ ವರ್ಷ ವರ್ಷ ಲುಕ್ಸಾನಾಗುತ್ತಿರುವುದಕ್ಕೆ ಕಾರಣವೇನು ?

ಶ್ರೀ ಆರ್. ದಯಾನಂದ ಸಾಗರ್.—ಖಾಸಗೀ ಜನರು ಲಾಭ ಸಂಪಾದಿಸುತ್ತಿದ್ದಾರೆಂಬುದಾಗಿ ಅವರು ಹೇಳಿದ್ದನ್ನು ನಾನು ಒಪ್ಪುವುದಿಲ್ಲ. ಆದರೆ ಸರ್ಕಾರದವರು ಈ ಉದ್ಯಮವನ್ನು ಬಡ ಜನರಿಗೆ ಜೀವನೋಪಾಯವನ್ನು ಕಲ್ಪಿಸತಕ್ಕ ದೃಷ್ಟಿಯಿಂದಲೂ ಕೈಗೊಂಡಿದ್ದಾರೆ. ಈ ದಿವಸ ಈ ಕೈಗಾರಿಕೆಯಲ್ಲಿ ಉತ್ಪತ್ತಿಯಾಗತಕ್ಕ ಕಕೂನಿನಲ್ಲಿ ಶೇ. 20 ರಷ್ಟನ್ನು ನಾವು ಕೊಂಡುಕೊಳ್ಳುತ್ತಿರುವುದರಿಂದ ಅಷ್ಟರಮಟ್ಟಿಗೆ ಈ ಕಸುಬಿನಲ್ಲಿರತಕ್ಕ ಜನರಿಗೆ ಇದರಿಂದ ಅನುಕೂಲವಾಗಿದೆ.

ಶ್ರೀ ಡಿ. ಎಂ. ಸಿದ್ದಯ್ಯ.—ಈಗ ತಾವು ಚಾಮರಾಜನಗರ ಮತ್ತು ಕೊಳ್ಳೇಗಾಲ ತಾಲ್ಲೂಕುಗಳಲ್ಲಿ ಮೂರು ಕಕೂನ್ ಮಾರ್ಕೆಟ್‌ಗಳನ್ನು ಸ್ಥಾಪಿಸಲಾಗಿದೆ ಎಂತ ಹೇಳೋಣವಾಗಿದೆ. ಹಾಗೇ ಈ ಚೆನ್ನಪಟ್ಟಣ ತಾಲ್ಲೂಕಿನಲ್ಲಿ ಯಾವಾಗ ಈ ಕಕೂನ್ ಮಾರ್ಕೆಟ್ಟನ್ನು ಸ್ಥಾಪನೆ ಮಾಡುತ್ತೀರಿ ?

ಶ್ರೀ ಆರ್. ದಯಾನಂದ ಸಾಗರ್.—ಅಲ್ಲಿಯೂ ಕೂಡ ಈ ವರ್ಷದ ಏಪ್ರಿಲ್ ತಿಂಗಳಾಖೈರೊಳಗಾಗಿ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ.

Repair to Adalli Guruvinakatte Tank in Santhebachanalli Hobli, Krishnarajapet Taluk.

*Q.—484. Sri N. NANJE GOWDA (Krishnarajapet).—

Will the Government be pleased to state:—

(a) the year in which Adalli Guruvinakatte tank in Santhebachanalli Hobli, Krishnarajapet Taluk, was constructed ;

(b) when it breached ;

(c) the persons responsible therefor ;

(d) when they propose to repair this tank ?

A.—Sri ALUR HANUMANTHAPPA (Deputy Minister for Minor Irrigation).—

(a) This is a very old tank. The restoration work was taken up during the year 1958.

(*b*) On 28th October 1960.
(*c*) The matter is under examination.
(*d*) During 1963-64.

ಶ್ರೀ ಎಚ್. ನಂಜೇಗೌಡ.—ಈ ಗುರುವಿನ ಕಟ್ಟೆ ಒಡೆದು ಇಲ್ಲಿಗೆಷ್ಟು ವರ್ಷಗಳಾಯಿತು ?

†ಶ್ರೀ ಆಲೂರು ಹನುಮಂತಪ್ಪ.—ಉತ್ತರದಲ್ಲೇ ತಿಳಿಸಿದೆ 28-10-1960 ಎಂತ.

ಶ್ರೀ ಎಚ್. ನಂಜೇಗೌಡ.—ಇಲ್ಲಿಯವರೆಗೇಕೆ ಅದನ್ನಿನ್ನೂ ದುರಸ್ತು ಮಾಡಲಿಲ್ಲಾ ?

ಶ್ರೀ ಆಲೂರು ಹನುಮಂತಪ್ಪ.—ಈ ಕೆಲಸವೆಲ್ಲ ನಂಪೂರ್ಣವಾಗಿ ಈ ವರ್ಷದ ಕೊನೆಯೊಳಗೆ ಮುಗಿಯುತ್ತದೆಂದು ನನ್ನ ಮುಂದಿರತಕ್ಕ ವರದಿಯಿಂದ ಗೊತ್ತಾಗುತ್ತಿದೆ.

ಶ್ರೀ ಟಿ. ಮಾದಯ್ಯಗೌಡ.—ಈ ಕೆರೆ 1958ರಲ್ಲಿ ರೆಸ್ಟೋರ್ ಆಗಿ ಮತ್ತೆ 1960 ರಲ್ಲೇ ಒಡೆದು ಹೋಗಿದೆ. ಈ ವಿಚಾರ ತನಿಖೆಮಾಡುತ್ತಿದ್ದೇವೆಂತ ಹೇಳುತ್ತಿದ್ದವರು ಈ ವಿಚಾರಣೆಯನ್ನು 1958ನೇ ಮಾರ್ಚಿಯಿಂದ ಇಲ್ಲಿಯವರೆಗೂ ಏಕೆ ಮುಗಿಸಲಿಲ್ಲ ? ಮುಗಿದಿದ್ದರೆ ಈ ಕೆಲಸ ಇಷ್ಟು ನಿಧಾನವಾಗಲು ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ಇದೊಂದು ಬಹಳ ಹಳೇ ಕೆರೆ. ಹಳೇ ಕೆರೆಗಳನ್ನು ಈಗ ಅಲ್ಲಲ್ಲೆ ರೆಸ್ಟೋರ್ ಮಾಡಲಾಗುತ್ತಿದೆ. ಈ ಕೆರೆ ರೆಸ್ಟೋರಾದಮೇಲೂ ಒಡೆದುಹೋಯಿತು. ನಮ್ಮ ಸಚ್ಚೆ ರಿಜಿಷ್ಟರ್‌ನಲ್ಲಿ ನಮೂದಾಗಿರುವಂತೆ ಈ ಕೆರೆ 50 ವರ್ಷಗಳ ಹಿಂದಿನದು ಬಹಳ ಚಿಕ್ಕಕೆರೆ. 15 ಎಕ್ರೆ ಅಚ್ಚುಕಟ್ಟಿದೆ. ಈಗ ಬ್ರೀಚ್ಡ್ ಆಗಿರುವ ಪೋರ್ಷನ್ನಿನಲ್ಲಿ ಮಠಳು ಜಾಸ್ತಿ ಯಾಗಿತ್ತು ಎಂತ ಇಂಜಿನಿಯರುಗಳು ವರದಿ ಮಾಡಿದ್ದಾರೆ.

ಶ್ರೀ ಟಿ. ಮಾದಯ್ಯಗೌಡ.—ಈ ವಿಚಾರಣೆಯನ್ನು ಇಲಾಖೆಯವರು ಮಾಡುತ್ತಾರೋ, ಅಂಟಿ ಕರಪ್‌ಷನ್ ಇಲಾಖೆಯವರು ಮಾಡುತ್ತಾರೋ ?

ಶ್ರೀ ಆಲೂರು ಹನುಮಂತಪ್ಪ.—ಇಲಾಖೆಯವರೇ ಮಾಡುತ್ತಿದ್ದಾರೆ. ಅಲ್ಲಿ ಭಾರಿ ಮಳೆ ಬಂದುದರಿಂದ ಆ ಕಟ್ಟೆ ಕಿತ್ತು ಹೋಗಿದೆ ಎಂತ ವರದಿ ಮಾಡಿದ್ದಾರೆ. ಆ ಬ್ರೀಚ್ಡ್ ಏರಿಯ 50 ಅಡಿ ಇದೆ. ಹಾಗೆ ಬ್ರೀಚಾದುದಕ್ಕೆ ಕಾರಣವೇನೆಂಬುದನ್ನು ಕಂಡುಹಿಡಿಯಬೇಕೆಂದು ಸರ್ಕಾರದಿಂದ ಅವರಿಗೆ ಆಜ್ಞೆ ಹೋಗಿದೆ.

Survey work of the Channel from Sangenahalli Tank to Naikanahatti Doddakere in Jagalur Taluk

*Q—558. Sri M. N. KRISHNA SINGH (Jagalur).—

Will the Government be pleased to state:—

whether in conducting the survey work of the channel from Sangenahalli tank to Naikanahatti Doddakere in Jagalur Taluk, they would consider the desirability of conducting the survey work *via* Mustur village so as to provide channel facility to that village ?

A.—Sri S. NIJALINGAPPA (Chief Minister).—

As no surveys have been conducted for feeder channel from Sangenahalli tank to Naikanahatti Hirekere, this question does not arise.

ಶ್ರೀ ಎಚ್. ಕೃಷ್ಣಸಿಂಗ್.—ಈ ಪ್ರಶ್ನೆ ಉದ್ಭವಿಸುವುದಿಲ್ಲ ಅಂತ ಉತ್ತರದಲ್ಲಿ ತಿಳಿಸಿದೆ. ಆದರೆ ಈ ನಾರೆಯನ್ನು ನಿರ್ಮಿಸಬೇಕೆಂದು ನಾಯಕನಹಟ್ಟಿ ಜನರು ಸರ್ಕಾರದಲ್ಲಿ ಮನವಿಮಾಡಿಕೊಂಡಿರಲಿಲ್ಲವೇ ?

†ಶ್ರೀ ಎಸ್. ನಿಜಲಿಂಗಪ್ಪ.—ಮನವಿ ಮಾಡಿಕೊಂಡಿದ್ದರು.

ಶ್ರೀ ಎಚ್. ಕೃಷ್ಣಸಿಂಗ್.—ಅವರ ಮನವಿಯನ್ನು ಪರಿಶೀಲನೆಮಾಡುತ್ತೀರಾ ?